ಅವರೂ ಸಂತೋಷ ಪಡ್ತಾರೆ. ನಾನು ಅಡುಗೆ, ತಿಂಡಿ ಎಲ್ಲ ಮಾಡಿ ತರ್ತೀನಿ. ನೀನೇನೂ ಮಾಡೋಕೆ ಹೋಗಬೇಡ.'

'ಬೇಡ ಸುಮತಿ, ಅವಳಿಗೆ ನನ್ನ ಕೈ ಅಡುಗೆ ಇಷ್ಟ. ಮತ್ತೆ ಪುಟ್ಟಂಗೆ ಶಾವಿಗೆ ಬೇಕಂತೆ. ಅವಳು ಅಲ್ಲಿಂದಲೇ ನನಗೆ ಹೇಳಿದ್ದಾಳೆ.'

'ಹಾಗಾದ್ರೆ ನೀನು ಶಾವಿಗೆ ಮಾತ್ರ ಮಾಡು. ಮಿಕ್ಕಿದ್ದನ್ನ ನಾನೇ ಮಾಡಿ ತರ್ತಿನಿ. ನಾಳೆಯಿಂದ ನಿನ್ನ ಅಡುಗೇನೇ ತಿನ್ನಲಿ ಅವಳು. ಇವತ್ತು ಈ ಚಿಕ್ಕಮ್ಮನ ಕೈಅಡುಗೆ ತಿನ್ನಲಿ. ಹಾಗೇ ಸ್ವೀಟ್ ತರ್ತೀನಿ. ನೀನೇನೂ ಮಾಡೋಕೆ ಹೋಗಬೇಡ' ಸುಮತಿ ಫೋನಿಟ್ಟಳು. ಅಷ್ಟರಲ್ಲೇ ಅಲ್ಲಿ ಇವರು, 'ಯಾರು ವಾಸಂತಿನ ಮಾತಾಡ್ತಿರೋದು... ಏನಂತೆ? ಚೆನ್ನಾಗಿದ್ದಾಳಾ? ಹೊಸ ಮನೆ ಹೇಗಿದೆಯಂತೆ?' ಅಂತ ಕೇಳುತ್ತಿದ್ದುದು ಕೂಡ ಫೋನಲ್ಲೇ ವಾಸಂತಿಗೆ ಕೇಳಿಸುತ್ತಿತ್ತು.

ವಾಸಂತಿ ಮನೆ ಸಜ್ಜು ಮಾಡುತ್ತಲೇ, ಮಗಳಿಗೆ ಕೊಠಡಿ ರೆಡಿ ಮಾಡುತ್ತ ಹಳೆಯ ನೆನಪುಗಳಿಗೆ ಜಾರಿದಳು. ಇವರು ಕಟ್ಟಾ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸುಬ್ರಹ್ಮಣ್ಯ ಚತುರ್ವೇದಿ. ತಾನು ಕೂಡ ಅಪ್ಪಟ ಬ್ರಾಹ್ಮಣ ಸಮುದಾಯದ ಹೆಣ್ಣು. ತಮ್ಮಿಬ್ಬರಿಗೂ ಮದುವೆಯಾಗಿ ಇವತ್ತು ಒಟ್ಟಿಗೆ ಇದ್ದಿದ್ದರೆ ಸುಮಾರು ನಲವತ್ತು ವರ್ಷಗಳಾಗಬೇಕಿತ್ತು. ಆದರೆ ವಿಧಿಗೆ ಏನು ತೋಚಿತ್ತೋ... ಇಬ್ಬರನ್ನೂ ಬೇರೆಯೇ ಮಾಡಿಬಿಟ್ಟಿತು. ತಂಗಿ ಸುಮತಿ ನನ್ನ ಸ್ಥಾನವನ್ನು ಅವರಿಗೆ ತುಂಬಿಕೊಟ್ಟಳು. ತನಗೆ, ಅವರ ಸ್ಥಾನವನ್ನು ಕಾಯಕ ತುಂಬಿಕೊಟ್ಟಿತು. ಆಗೆಲ್ಲ ಎಷ್ಟು ರೋದನಗಳು... ಕೇಳುತ್ತಿದ್ದವರು ಯಾರು?

ತವರು ಮನೆ ಎಂದರೆ ಎಂತಹ ಸಂಭ್ರಮ. ಪ್ರತಿ ಹೆಣ್ಣಿಗೂ ಅದು ಸ್ವರ್ಗವೇ ಸರಿ. ತನಗೇ ಅದು ಶಾಶ್ವತವಾಗಿ ಮುಚ್ಚಿಹೋಯಿತೋ... ಅಥವಾ ತಾನೇ ಅದರ ಬಾಗಿಲು ಹಾಕಿದೆನೋ ಯಾರಿಗೆ ಗೊತ್ತು. ತಾನು ಓದಿದ್ದಾದರೂ ಎಷ್ಟು... ಬರೀ ಏಳನೆಯ ಇಯತ್ತೆ. ಅದೂ ಅಮ್ಮ ಶಾಲೆಗೆ ಕಳುಹಿಸಿದರೆ. ಎಂಟು ಕಂಬದ ದೊಡ್ಡ ಪಡಸಾಲೆಯ ಮನೆಯಲ್ಲಿ ಯಾವಾಗಲೂ ಅತಿಥಿಗಳ ನೆರೆ. ಒಬ್ಬರೇ, ಇಬ್ಬರೇ... ಊರಿಂದ ಬಂದವರು, ಊರಿಗೆ ಹೋಗುವಾಗ ತಂಗುವವರು, ಓದಲೆಂದು ಬಂದವರು, ರಜೆ ಕಳೆಯಲು ಬಂದವರು... ಮನೆ ಎಂಬುದು ಒಂದು ಧರ್ಮ ಛತ್ರದಂತೆ. ಎಲ್ಲೋ ಒಂದು ಕೊಂಡಿಯ ಸಂಬಂಧ ಎಲ್ಲರ ಜೊತೆ ಅಂಟಿಕೊಂಡಿರುತ್ತಿತ್ತು. ತೋಟ, ಗದ್ದೆಗಳು ಹೇರಳವಾಗಿದ್ದವು. ಜೊತೆಯಲ್ಲಿ ಅಪ್ಪನ ಕಾಲೇಜು ಉದ್ಯೋಗ ಬೇರೆ. ಯಾವುದಕ್ಕೂ ಕಡಿಮೆ ಇರಲಿಲ್ಲ. ತಾನೇ ಹಿರಿಯ ಮಗಳು. ಎಲ್ಲದಕ್ಕೂ ಹೊಂದಿಕೊಂಡು ಹೋಗಬೇಕು. ಇಬ್ಬರು ತಮ್ಮಂದಿರು, ಒಬ್ಬಳು ತಂಗಿ. ಅಮ್ಮ ಯಾವಾಗಲೂ ಹೇಳುತ್ತಿದ್ದಳು, 'ಏನು ಮಾಡೋದೇ ವಾಸೀ... ನೀನು ಹಿರಿ ಮಗಳು. ನೀನೇ ಹೊಂದಿಕೊಳ್ಳಬೇಕು. ಬಿಟ್ಟುಕೊಡಬೇಕು... ಒಂದು ಮಾತ್ರ ತಿಳಕೋ ವಾಸಿ, ನೀನೇ ಕಂಬ ಈ ಕುಟುಂಬಕ್ಕೆ. ಮರೀಬೇಡ... ಯಾವತ್ತೂ ಜಗಳಕ್ಕೆ ಆಸ್ಪದ ಕೊಡಬೇಡ...' ಊದಿ, ಊದಿ, ಅರೆದು ಕುಡಿಸಿದ ಪಾಠ. ತಂಗಿಯರು, ತಮ್ಮಂದಿರು ಶಾಲೆಗೆ ಹೊರಟರೆ ತಾನು ಬಂದವರನ್ನು ನೋಡಿಕೊಳ್ಳಲು, ನೀರುಣಿಸಲು, ಹಂಡೆಗೆ ಉರಿ ಹಾಕಲು, ಅಡುಗೆ ಸಹಾಯ ಮಾಡಲು, ಬಡಿಸಲು... ಎಲ್ಲದಕ್ಕೂ ಅಮ್ಮನ ಜೊತೆ. 'ವಾಸೀ... ನಾಳೆ ಸ್ಕೂಲು ಬೇಡ ಕಣೆ. ತಿಪಟೂರಿಂದ ನಿನ್ನ ಸೋದರತ್ತೆ, ಅಳಿಯ, ಮಕ್ಕಳು ಎಲ್ಲ ಬರ್ತಿದ್ದಾರೆ. ಅವರನ್ನೆಲ್ಲ ನಾನೊಬ್ಬಳೇ ನೋಡೋಕೆ ಆಗಬೇಕಲ್ಲ ತಾಯಿ! ನೀನು ಹೋದರೆ ನನ್ನ ಕೈ ಕಟ್ಟಿ ಹೋಗುತ್ತೆ...' ಅಮ್ಮ ಅಂದ ಕೂಡಲೆ ನಾನು ಶಾಲೆಗೆ ರಜೆ. ಇಂತಹ ರಜೆಗಳು ಆಗಿ, ಆಗಿ ಏಳರ ವರೆಗೆ ಬಂದದ್ದೇ ಹೆಚ್ಚು. ನಂತರ ಶಾಲೆಗೆ ಹೋಗಲೇ ಇಲ್ಲ. ಅಮ್ಮ ನನ್ನ ಕಿವಿ ಊದುವುದಲ್ಲದೆ ಅಪ್ಪನ ಜೊತೆಯೂ ಜಗಳ ತೆಗೀತಿದ್ದರು. 'ವಾಸಂತಿಗೆ ಶಾಲೆಗೆ ಹೋಗಲು ಏನು ಧಾಡಿ ಅಂತೀನಿ. ಅವಳಿಗಿಂತ ಚಿಕ್ಕವರೆಲ್ಲ